ಎಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆಯೆಂದು ಮತ್ತು ಎಷ್ಟು ಹಣವನ್ನು ಇದಕ್ಕೆ ಮೆಂಜೂರು ಮಾಡಲಾಯಿತು;

ಆ) ಈ ಕೆಲಸಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು;

ಇ) ತಾಂತ್ರಿಕ ಮಂಜೂರಾತಿಯನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ಏನಾ ಕಾರಣ ವಿಳಂಬ ಮಾಡಲಿಕ್ಕೆ ಹತ್ತಿದ ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಉ) ಈ ವರ್ಷ ಕೆಲಸಕ್ಕೆ ಎಷ್ಟು ಹಣ ಒದಗಿಸಲಾಗಿದೆ ಮತ್ತು ಈ ವರ್ಷ ಆಯವ್ಯಯದಲ್ಲಿ ಒದಗಿಸಿದ ಹಣವನ್ನು ಖರ್ಚು ಮಾಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ;

ಊ) ಈ ಯೋಜನೆಯಿಂದ ಒಟ್ಟು ಎಷ್ಟು ಎಕರೆ ನೀರಾವರಿಯಾಗುವುದು ಮತ್ತು ಈ ಯೋಜನೆಯಿಂದ ಯಾವ ಯಾವ ಗ್ರಾಮದ ಜನರಿಗೆ ಲಾಭ ಪಡೆದುಕೊಳ್ಳಲು ಅನುಕೂಲವಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 129.36 ಲಕ್ಷ ರೂ. ಅಂದಾಜಿಗೆ ಸರ್ಕಾರಿ ಆದೇಶ ನೀಇ 117 ಸನೀಬೆ 91 ದಿನಾಂಕ: 13.1.93ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಆ) ದಿನಾಂಕ 16.2.93

ಇ) ಉತ್ತರ (ಅ)ದ ಮೇರೆಗೆ ಉದ್ಭವಿಸುವುದಿಲ್ಲ.

ಈ) ಉತ್ತರ (ಅ)ದ ಮೇರೆಗೆ ಉದ್ಭವಿಸುವುದಿಲ್ಲ.

ಉ) 92–93ನೇ ಸಾಲಿನಲ್ಲಿ 40.00 ಲಕ್ಷ ರೂ. ಅನುದಾನ ಒದಗಿಸಲಾಗಿದ್ದು; ಇದನ್ನು ಖರ್ಚು ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ಊ) 1186 ಎಕರೆ ಚಿಕ್ಕಬುದನೂರು ಹಿರೇಬುದನೂರು ಮತ್ತು ಕುಟರನಟ್ಟಿ ಗ್ರಾಮಗಳ ಜನರು ಲಾಭ ಪಡೆಯುವರು.

ಕೊರಟಗೆರೆ ಟೌನ್ ಪ್ರಧಾನ ರಸ್ತೆಯ ರಿಪೇರಿ

487 (992): ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊರಟಗೆರೆ–ಮಧುಗಿರಿ ರಸ್ತೆ ಅಂದರೆ ಕೊರಟಗೆರೆ ಟೌನ್‌ನಲ್ಲಿ ಹಾದು ಹೋಗುವ ಪ್ರಧಾನ ರಸ್ತೆಯಲ್ಲಿ ಗುಂಡಿ ಬಿದ್ದು ಬಸ್ಸುಗಳು ಓಡಾಡಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ರಸ್ತೆಯ ಎರಡು ಪಕ್ಕದಲ್ಲಿ ಡ್ರೈನೇಜು ಮಾಡಿ ರಸ್ತೆ ರಿಪೇರಿ ಅಥವಾ ರೀಅಸ್ಫಾಲ್ಟಿಂಗ್ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಈ ಭಾಗದ ರಸ್ತೆಯು ಸುಸ್ಥಿತಿಯಲ್ಲಿದ್ದು ಸಂಚಾರಕ್ಕೆ ತೊಂದರೆ ಆಗಿರುವುದಿಲ್ಲ.

ಆ) ಕೊರಟಗೆರೆ ಪಟ್ಟಣ ವ್ಯಾಪ್ತಿಯಲ್ಲಿ ಇರುವ ರಸ್ತೆಯ ಭಾಗದ ಮರು ಡಾಂಬರೀಕರಣವನ್ನು 0.65 ಲಕ್ಷ ರೂ.ಗಳ ಅಂದಾಜಿನಲ್ಲಿ ಮಾಡಲಾಗುತ್ತಿದ್ದು, ಮಾರ್ಚ್ 93ರ ಒಳಗೆ ಪೂರ್ಣಗೊಳಿಸಲಾಗುವುದು. ನಗರ ಪ್ರದೇಶ ವ್ಯಾಪ್ತಿಯಲ್ಲಿ ಮೋರಿಗಳನ್ನು ಕೊರಟಗೆರೆ ಮಂಡಲ ಪಂಚಾಯಿತ್‌ನವರು ಮಾಡಬೇಕಿರುತ್ತದೆ.

Express Highway Between Mysore–Bangalore

489 (993): Sri G. Puttaswamy Gowda (Holenarasipur):–

Will the Minister for Public Works be pleased to state.

a) whether there is any proposal for the Express Highway between Mysore–Bangalore;

b) whether any survey has been made in this regard;

c) if so, the estimated cost of the above work;

d) the amount, if any, spent so far;

e) when the above work will be taken up?

Sri K.H. RANGANATH (Minister for Public Works):–

a) Yes.

b) Preliminary surveys are conducted.

c) Rs. 200 Crores.

d) Rs. 17.98 Lakhs on Surveys.

e) The proposal is under examination of Government.

ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜ್ ನಿರ್ಮಾಣ ಕಾರ್ಯ

490 (995): ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜ್ ನಿರ್ಮಾಣ ಕಾರ್ಯವನ್ನು ಸರ್ಕಾರವು ಕೈಗೆತ್ತಿಕೊಂಡಿದೆಯೇ;

ಆ) ಇಲ್ಲಿಯವರೆಗೆ ವೆಚ್ಚವಾದ ಹಣ;

ಇ) ಸದರಿ ಬ್ಯಾರೇಜ್ ಪೂರ್ಣಗೊಂಡ ನಂತರ ನೀರಾವರಿಯಾಗುವ ಎಕರೆ ಪ್ರದೇಶ;